ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೆ ನೇರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಆಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿದು ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀರ್ಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀರ್ಗಳಲ್ಲಿ ಕಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀರ್ಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರವ್ಹಾಗುವ ಸ್ಥಳ ಈ ಪಬ್ಲೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ಯ 1896–97ನೇ ಸಾಲಿಗೆ ಮುದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಚಾರೆ ಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂ ಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ಸಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಪುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮುದ್ದಗಿರಿ ತಾರೀಖು 29—9—96 ಮುದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಶೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸು ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಶೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡವ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಭಾಯಿದೆ ಭಾಗ, ದರಖಾಸ್ತುದಾರರು ಹೊಂತಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅವರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅವರಾಯಿ ಫಲ ಜುಟ್ಟುವಳಿಗಳು ಮೇಲ್ಕಂಡ ಪಚಾರೆ ಜಿನಸುಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.